OS No. 98/2024

PW-1

**(ಇಂದು ದಿಃ 26-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಮುಂದುವರೆದ ಮುಖ್ಯ ವಿಚಾರಣೆಃ- ವಾದಿ ಪರ ಶ್ರೀ. ಎನ್ ಆರ್ ಎಮ್ ವಕೀಲರಿಂದಃ-**

ಈ ದಿನ ನಾನು ನನ್ನ ಮುಖ್ಯ ವಿಚಾರಣೆಯಾಗಿ ಪ್ರತಿಜ್ಞಾ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನ್ನ ತಿಳುವಳಿಕೆಯ ಮೇರೆಗೆ ಬರೆಯಲ್ಪಟ್ಟಿರುತ್ತವೆ ಮತ್ತು ಅವು ಸತ್ಯವಾಗಿರುತ್ತವೆ. ಪ್ರತಿಜ್ಞಾ ಪತ್ರಕ್ಕೆ ಸಹಿ ಮಾಡಿರುತ್ತೇನೆ.

ಅಸಲು ದಾವಾ ನಂಬರ 34/97ರಲ್ಲಿನ ತೀರ್ಪು ಮತ್ತು ಡಿಕ್ರಿಯನ್ನು ನಿಪಿ-1 ಎಂದು, ಎಫ್.ಡಿ.ಪಿ ನಂಬರ 3/2000ರಲ್ಲಿನ ಅಂತಿಮ ಡಿಕ್ರಿಯನ್ನು ನಿಪಿ-2 ಎಂದು, ಓಎಸ್ ನಂಬರ 34/1997ರಲ್ಲಿನ ಆದೇಶ ಪ್ರತಿಯನ್ನು ನಿಪಿ-3 ಎಂದು, ಎಫ್.ಡಿ.ಪಿ ನಂಬರ 3/2000ರಲ್ಲಿನ ಅರ್ಜಿಯ ದೃಢಿಕೃತ ನಕಲನ್ನು ನಿಪಿ-4 ಎಂದು, ಕಮೀಷನರ್ ವರದಿಯನ್ನು ನಿಪಿ-5 ಎಂದು, ಸರ್ವೆಯರ್ ನೀಡಿದ ನಮೂನೆ-10ಅನ್ನು ನಿಪಿ-6 ಎಂದು, ಸಿದ್ದಮ್ಮರವರ ಮರಣ ಪ್ರಮಾಣ ಪತ್ರವನ್ನು ನಿಪಿ-7 ಎಂದು, ದಿನಾಂಕಃ 12-04-2024ರ ನೊಂದಾಯಿತ ಖರೀದಿ ಪತ್ರದ ದೃಢಿಕೃತ ನಕಲನ್ನು ನಿಪಿ-8 ಎಂದು, ಪಹಣಿಯನ್ನು ನಿಪಿ-9 ಎಂದು, ಅಸಲು ದಾವಾ ನಂಬರ 128/2005ರಲ್ಲಿನ ತೀರ್ಪು ಮತ್ತು ಡಿಕ್ರಿಯನ್ನು ನಿಪಿ-10 ಮತ್ತು 11 ಎಂದು, ಆರ್ ಎ ನಂಬರ 178/2008ರಲ್ಲಿನ ತೀರ್ಪು ಮತ್ತು ಡಿಕ್ರಿಯನ್ನು ನಿಪಿ-12 ಮತ್ತು 13 ಎಂದು , ಪಹಣಿಯನ್ನು ನಿಪಿ-14 ಎಂದು, 2 ಮುಟೇಷನ್ ರಜೇಸ್ಟರ್ ಗಳನ್ನು ನಿಪಿ-15 ಮತ್ತು 16 ಎಂದು, ಪಹಣಿಯನ್ನು ನಿಪಿ-17 ಎಂದು, ಟೊಂಚ್ ನಕಾಶೆಯನ್ನು ನಿಪಿ-18 ಎಂದು, ಫೊಡಿ ಟಿಪ್ಪಣಿಯನ್ನು ನಿಪಿ-19 ಎಂದು, ಸರ್ವೇಯರ್ ನೀಡಿದ ನಮೂನೆ-10ಅನ್ನು ನಿಪಿ-20 ಎಂದು, ಆಕಾರಬಂದ ಎಕ್ಸಟ್ರಾಕ್ಟ ಅನ್ನು ನಿಪಿ-21 ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ಇಲ್ಲ.**

**(ಪ್ರತಿವಾದಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲಿಗೆ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**